# GOVERNMENT OF KARNATAKA

# KARNATAKA LOKAYUKTA

No.UPLOK-1/DE/24/2019/ARE-14

Multi Storied Building,
Dr. B.R. Ambedkar Veedhi,
Bengaluru-560001
Date: 01st September, 2022.

## RECOMMENDATION

Sub: Departmental Inquiry against Shriyuths:
(1) Thanji Wadikar, the then Junior Engineer, Taluk Panchayath, Aurad (B), presently working as Assistant Executive Engineer, Rural Drinking Water and Sanitation Sub-Division, Byadagi, Haveri District.
(2) Dasharatha Gayakwad, the then Secretary, Bhandara Kumta Grama Panchayath, Aurad (B) Taluk (now retired)-reg.,

Ref: 1) Government Order No.ಗ್ರಾಅಪ: 33: ಇಎನ್‌ಕ್ಯೂ 2018, Bengaluru, dated: 15/11/2018.

2) Nomination Order No.UPLOK-1/DE/24/2019, Bengaluru, dated: 24/01/2019 of Upalokayukta, State of Karnataka, Bengaluru.

3) Inquiry Report dated: 29/08/2022 of Additional Registrar of Enquiries-14, Karnataka Lokayukta, Bengaluru.

*****

The Government by its order dated: 15/11/2018 initiated the disciplinary proceedings against (1) Shri Thanji Wadikar, the then Junior Engineer, Taluk Panchayath, Aurad (B), presently

working as Assistant Executive Engineer, Rural Drinking Water and Sanitation Sub-Division, Byadagi, Haveri District and (2) Shri Dasharatha Gayakwad, the then Secretary, Bhandara Kumta Grama Panchayath, Aurad (B) Taluk (now retired) (hereinafter referred to as Delinquent Government Official, for short as DGO Nos.1 and 2) and entrusted the Departmental Inquiry to this Institution.

2. This Institution by Nomination Order No.UPLOK-1/DE/21/2019, Bengaluru, dated: 24/01/2019 nominated Additional Registrar of Enquiries-14, Karnataka Lokayukta, Bengaluru, as the Inquiry Officer to frame charges and to conduct Departmental Inquiry against DGOs No.1 and 2.

3. The DGO No.1, Shri Thanji Wadikar, the then Junior Engineer, Taluk Panchayath, Aurad (B), presently working as Assistant Executive Engineer, Rural Drinking Water and Sanitation Sub-Division, Byadagi, Haveri District and DGO No.2, Shri Dasharatha Gayakwad, the then Secretary, Bhandara Kumta Grama Panchayath, Aurad (B) Taluk (now retired) were tried for the following charges:

**ANNEXURE NO.1**
**CHARGE**

That, you DGO No.1 Sri. Thanji Wadikar, Junior Engineer, Taluk Panchayath, Aurad (B), Bidar Distrct, you DGO No. 2 Sri. Dasharatha Gayakwad, Secretary, Grama Panchayath, Bhandara Kumta, Aurad(B) Taluk, Bidar District, have committed the following misconduct:-

1. You DGO No.1 Sri. Thanji Wadikar, as Junior Engineer, DGO No.2 Sri. Dasharatha Gayakwad, as Secretary being the grants of Rs. 1,80,000/- in the year 2003-04 under development fund, grant of Rs. 1,00,000/- in the year 2005-06 under SJRY funds, grant of Rs. 75,000/- in the year 2005-06 under Jawaharlal Scheme funds, in all grant of Rs. 3,55,000/- was sanctioned for constructing Grama Panchayath building at Bhandara Kumata Grama Panchayath. The amount spent is mentioned as Rs. 1,45,791/-. But in the cash book an amount Rs. 2,39,755/- is shown to be spent towards construction of the Grama Panchayath building. Therefore the excess amount i.e. 2,39,755 - 1,45,791 = 94,004/- has been shown to be spent without any expenditure details in the records. Without constructing the building, money has been misappropriated and thereby misappropriated the said amount by utilizing for yourselves.

Thus, you DGOs 1 and 2, being Government/public servants have failed to maintain absolute integrity and devotion to duty and acted in a manner unbecoming of Government servants and thus, you have committed misconduct U/Rule 3(1)(i) to (iii) of Karnataka Civil Services (Conduct) Rules, 1966.

4. The Inquiry Officer (Additional Registrar of Enquiries-14) on proper appreciation of oral and documentary evidence has held that, the Disciplinary Authority has 'Partly Proved' the charges leveled against DGO No.1, Shri Thanji Wadikar, the then Junior

Engineer, Taluk Panchayath, Aurad (B), presently working as Assistant Executive Engineer, Rural Drinking Water and Sanitation Sub-Division, Byadagi, Haveri District.

The Disciplinary Authority has 'Not Proved' the charges leveled against and DGO No.2, Shri Dasharatha Gayakwad, the then Secretary, Bhandara Kumta Grama Panchayath, Aurad (B) Taluk (now retired).

5. On perusal of the Inquiry Report, in order to prove the guilt of the DGO, the Disciplinary Authority has examined two witnesses i.e., PW-1 and PW-2 and Ex. P-1 to P-11 documents were got marked. DGO No.1 has examined himself as DW-1 and Ex. D-1 to D-5 documents were got marked.

6. On re-consideration of Inquiry Report and taking note of the totality of the circumstances of the case, I do not find any reason to interfere with the findings recorded by the Inquiry Officer. Therefore, it is hereby recommended to the Government to accept the report of the Inquiry Officer.

7. As per the First Oral Statement of DGO furnished by the Inquiry Officer, DGO No.1, Shri Thanji Wadikar has retired from service on 31/05/2020 and DGO No.2, Shri Dasharatha Gayakwad has retired from service on 31/10/2011.

8. Having regard to the nature of charge 'Partly Proved' against DGO No.1, Shri Thanji Wadikar, the then Junior Engineer, Taluk Panchayath, Aurad (B), presently working as Assistant Executive Engineer, Rural Drinking Water and Sanitation Sub-Division, Byadagi, Haveri District and 'Not Proved' against DGO No.2, Shri Dasharatha Gayakwad, the then Secretary, Bhandara Kumta Grama Panchayath, Aurad (B) Taluk (now retired) and on consideration of the totality of circumstances:-

> "It is hereby recommended to the Government to impose penalty of withholding 10% of pension payable to DGO No.1, Shri Thanji Wadikar, the then Junior Engineer, Taluk Panchayath, Aurad (B), presently working as Assistant Executive Engineer, Rural Drinking Water and Sanitation Sub-Division, Byadagi, Haveri District for a period of two years and also to recover a sum of Rs.94,004/- from DGO No.1".
>
> "It is hereby recommended to the Government to exonerate DGO No.2, Shri Dasharatha Gayakwad, the then Secretary, Bhandara Kumta Grama Panchayath, Aurad (B) Taluk (now retired) of the charges leveled against him".

9. Action taken in the matter shall be intimated to this Authority.

Connected records are enclosed herewith.

**(JUSTICE K.N.PHANEENDRA)**
UPALOKAYUKTA-2,
STATE OF KARNATAKA.

# ಕರ್ನಾಟಕ ಲೋಕಾಯುಕ್ತ

ನಂ.ಉಪಲೋಕ್-1/ಡಿಇ-24/2019/ಎ.ಆರ್.ಇ-14

ಡಾ॥ ಬಿ.ಆರ್.ಅಂಬೇಡ್ಕರ್ ವೀದಿ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು-560001,
ದಿನಾಂಕ: 29/08/2022.

## ವಿಚಾರಣಾ ವರದಿ

**ಉಪಸ್ಥಿತರು: ಸುದೇಶ್ ರಾಜಾರಾಮ್ ಪರದೇಶಿ,**
ಅಪರ ನಿಬಂಧಕರು ವಿಚಾರಣೆಗಳು-14,
ಕರ್ನಾಟಕ ಲೋಕಾಯುಕ್ತ, ಬೆಂಗಳೂರು.

**ವಿಷಯ:** ಆ.ಸ.ನೌಕರ (1) **ಶ್ರೀ. ತಾನಾಜಿ ವಾಡಿಕರ,** ಅಂದಿನ ಕಿರಿಯ ಅಭಿಯಂತರರು, ತಾಲ್ಲೂಕು ಪಂಚಾಯತಿ, ಔರಾದ್ (ಬಿ) ಹಾಲಿ ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಉಪ-ವಿಭಾಗ, ಬ್ಯಾಡಗಿ, ಹಾವೇರಿ ಜಿಲ್ಲೆ ಮತ್ತು (2) ಶ್ರೀ. **ದಶರಥ ಗಾಯಕವಾಡ್,** ಅಂದಿನ ಕಾರ್ಯದರ್ಶಿ, ಭಂಡಾರ ಕುಮಟಾ ಗ್ರಾಮ ಪಂಚಾಯತಿ, ಔರಾದ್ (ಬಿ) ತಾಲ್ಲೂಕು (ಪ್ರಸ್ತುತ ನಿವೃತ್ತ) ಇವರುಗಳ ವಿರುದ್ಧದ ಇಲಾಖಾ ವಿಚಾರಣೆ ಕುರಿತು.

**ಉಲ್ಲೇಖ:**
1. ಕಂಪ್ಲೆಂಟ್/ಉಪಲೋಕ್/ಜಿಎಲ್‌ಬಿ/254/2007/ಡಿ.ಆರ್.ಇ-3 ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(3) ರನ್ವಯ ವರದಿ ದಿನಾಂಕ: 16/03/2018.
2. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 33 ಇಎನ್‌ಕ್ಯೂ 2018, ಬೆಂಗಳೂರು, ದಿನಾಂಕ: 15/11/2018.
3. ನಾಮನಿರ್ದೇಶನ ಸಂಖ್ಯೆ:ಉಪಲೋಕ್-1/ಡಿಇ/24/2019, ಬೆಂಗಳೂರು ದಿನಾಂಕ: 24/01/2019.

* * * * * *

ಈ ದೂರನ್ನು, ದೂರುದಾರರಾದ **ಶ್ರೀ. ನಾರಾಯಣ ರಾವ್ ಪಾಟೀಲ್** ಬಿನ್ ಬಾಬು ರಾವ್ ಪಾಟೀಲ್, ಭಂಡಾರ ಕುಮುಟ ಪೋಸ್ಟ್, ಭಂಡಾರ ಕುಮುಟ, ಔರಾದ್ ತಾಲ್ಲೂಕು, ಬೀದರ್ ಜಿಲ್ಲೆ ರವರು ಆಪಾದಿತ ಸರ್ಕಾರಿ ನೌಕರ (1) **ಶ್ರೀ. ತಾನಾಜಿ ವಾಡಿಕರ,** ಅಂದಿನ

ಕಿರಿಯ ಅಭಿಯಂತರರು, ತಾಲ್ಲೂಕು ಪಂಚಾಯತಿ, ಔರಾದ್ (ಬಿ) ಹಾಲಿ ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಉಪ-ವಿಭಾಗ, ಬ್ಯಾಡಗಿ, ಹಾವೇರಿ ಜಿಲ್ಲೆ ಮತ್ತು (2) **ಶ್ರೀ. ದಶರಥ ಗಾಯಕವಾಡ್,** ಅಂದಿನ ಕಾರ್ಯದರ್ಶಿ, ಭಂಡಾರ ಕುಮಟಾ ಗ್ರಾಮ ಪಂಚಾಯತಿ, ಔರಾದ್ (ಬಿ) ತಾಲ್ಲೂಕು (ಪ್ರಸ್ತುತ ನಿವೃತ್ತ) ಇವರುಗಳ ವಿರುದ್ಧ ಸಲ್ಲಿಸಿರುತ್ತಾರೆ, ತಮ್ಮ ದೂರಿನಲ್ಲಿ ಅಭಿವೃದ್ಧಿ ಯೋಜನೆ ಅಡಿಯಲ್ಲಿ 2003-04ನೇ ಸಾಲಿನಲ್ಲಿ ರೂ.1,80,000/-; ಎಸ್.ಜೆ.ಆರ್.ವೈ ಯೋಜನೆ 2005-06ನೇ ಸಾಲಿನಲ್ಲಿ ರೂ.1,00,000/- ಹಾಗೂ ಜವಹರ್‌ಲಾಲ್ ಯೋಜನೆ ಅಡಿಯಲ್ಲಿ ರೂ.75,000/-ಗಳು ಒಟ್ಟು ಹೀಗೆ ರೂ.3,55,000/- ಗಳನ್ನು ಭಂಡಾರ ಕುಮುಟ ಗ್ರಾಮ ಪಂಚಾಯಿತಿ ಕಟ್ಟಡ ನಿರ್ಮಿಸಲು ಮಂಜೂರಾತಿ ನೀಡಿದ್ದು, ಆದರೆ ಕಟ್ಟಡವನ್ನು ನಿರ್ಮಿಸದೇ ಹಣವನ್ನು ದುರುಪಯೋಗಪಡಿಸಿಕೊಂಡಿರುತ್ತಾರೆ ಅಂತಾ ಹೇಳಿರುತ್ತಾರೆ.

ನಂತರ ಸದರಿ ದೂರನ್ನು ಆಪಾದಿಸಿದ ವಿಷಯದ ಬಗ್ಗೆ ತನಿಖೆಯನ್ನು ಮಾಡಿ ತನಿಖಾ ವರದಿಯನ್ನು ಸಲ್ಲಿಸಲು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತಿ, ಬೀದರ್ ಇವರಿಗೆ ವಹಿಸಿದ್ದು, ನಂತರದಲ್ಲಿ ಔರಾದ್ (ಬಿ) ತಾಲ್ಲೂಕು ಪಂಚಾಯಿತಿಯ ಕಾರ್ಯನಿರ್ವಾಹಕ ಅಧಿಕಾರಿಗಳು ತನಿಖೆಯನ್ನು ಮಾಡಿ ವರದಿಯನ್ನು ಸಲ್ಲಿಸಿರುತ್ತಾರೆ.

2. ತನಿಖೆ ಪೂರ್ಣಗೊಂಡ ನಂತರ, ಸರ್ಕಾರಕ್ಕೆ ಕರ್ನಾಟಕ ಲೋಕಾಯುಕ್ತ ಅಧಿನಿಯಮದ ಕಲಂ 12(3)ರಡಿಯಲ್ಲಿ ಉಲ್ಲೇಖ (1)ರಲ್ಲಿ ಕಾಣಿಸಿದಂತೆ, ವರದಿ ಸಲ್ಲಿಸಿದ್ದು, ಸದರಿ ವರದಿಯನ್ವಯ ಕರ್ನಾಟಕ ಸರ್ಕಾರವು ಉಲ್ಲೇಖ (2)ರಲ್ಲಿ ಕಾಣಿಸಿದಂತೆ, ದಿನಾಂಕ: 15/11/2018ರ ಆದೇಶದಂತೆ, ಮಾನ್ಯ ಉಪಲೋಕಾಯುಕ್ತ ರವರಿಗೆ ವಿಚಾರಣೆ ಮಾಡಿ ವರದಿ ಸಲ್ಲಿಸುವಂತೆ ವಹಿಸಿದ್ದು, ಮಾನ್ಯ ಉಪಲೋಕಾಯುಕ್ತ ರವರು ದಿನಾಂಕ: 24/01/2019 ರಂದು ಅಪರ ನಿಬಂಧಕರು, ವಿಚಾರಣೆಗಳು-14 ರವರಿಗೆ ವಿಚಾರಣೆ ಮಾಡಿ, ವರದಿ ಸಲ್ಲಿಸುವಂತೆ ಉಲ್ಲೇಖ (3)ರಲ್ಲಿ ಕಾಣಿಸಿದಂತೆ ನಾಮನಿರ್ದೇಶನ ಮಾಡಿದ್ದು ಇರುತ್ತದೆ.

3. ನಾಮನಿರ್ದೇಶನದ ಆದೇಶದಂತೆ, ಆ.ಸ.ನೌ ರವರುಗಳ ವಿರುದ್ಧ ದೋಷಾರೋಪಣೆ *(Articles of Charge)* ಅನ್ನು ಅಪರ ನಿಬಂಧಕರು, ವಿಚಾರಣೆಗಳು-14 ರವರು ರಚಿಸಿದ್ದು, ಸದರಿ ದೋಷಾರೋಪಣೆಯು ಅನುಬಂಧ-1 ಮತ್ತು ಅನುಬಂಧ-2 ರೊಂದಿಗೆ ದುರ್ನಡತೆ ಮತ್ತು ಕರ್ತವ್ಯಲೋಪಕ್ಕೆ ಸಂಬಂಧಪಟ್ಟಂತೆ, ವಿವರಗಳುಳ್ಳ ಆರೋಪವನ್ನು ಆ.ಸ.ನೌರವರುಗಳಿಗೆ ದಿನಾಂಕ: 19/02/2019 ರಂದು ಕಳುಹಿಸಲಾಗಿರುತ್ತದೆ.

**ಅನುಬಂಧ-1**

**ದೋಷಾರೋಪಣೆ**

2. That, you DGO No.1 Sri. Thanji Wadikar, Junior Engineer, Taluk Panchayath, Aurad (B), Bidar Distrct, you DGO No. 2 Sri. Dasharatha Gayakwad, Secretary, Grama Panchayath, Bhandara Kumta, Aurad(B) Taluk, Bidar District, have committed the following misconduct:-

   i. You DGO No.1 Sri. Thanji Wadikar, as Junior Engineer, DGO No.2 Sri. Dasharatha Gayakwad, as Secretary being the grants of Rs. 1,80,000/- in the year 2003-04 under development fund, grant of Rs. 1,00,000/- in the year 2005-06 under SJRY funds, grant of Rs. 75,000/- in the year 2005-06 under Jawaharlal Scheme funds, in all grant of Rs. 3,55,000/- was sanctioned for constructing Grama Panchayath building at Bhandara Kumata Grama Panchayath. The

<signature>

amount spent is mentioned as Rs. 1,45,791/-. But in the cash book an amount Rs. 2,39,755/- is shown to be spent towards construction of the Grama Panchayath building. Therefore the excess amount i.e. 2,39,755 - 1,45,791 = 94,004/- has been shown to be spent without any expenditure details in the records. Without constructing the building, money has been misappropriated and thereby misappropriated the said amount by utilizing for yourselves.

3. Thus, you DGOs 1 and 2, being Government/public servants have failed to maintain absolute integrity and devotion to duty and acted in a manner unbecoming of Government servants and thus, you have committed misconduct U/Rule 3(1)(i) to (iii) of Karnataka Civil Services (Conduct) Rules, 1966.

**ಅನುಬಂಧ–2**

**ದೋಷಾರೋಪಣೆಯ ವಿವರ**

**(ಸ್ಟೇಟ್‌ಮೆಂಟ್ ಆಫ್ ಇಂಪ್ಯೂಟೇಷನ್ ಆಫ್ ಮಿಸ್‌ಕಾಂಡೆಕ್ಟ್)**

8

4. An investigation was taken up under Section 9 of The Karnataka Lokayukta Act, 1984, on the basis of complaint filed by Shri. Narayana Rao Patil, S/o Babu Rao Patil, Bhandara Kumata Post, Bhandara Kumata, Aurad Taluk, Bidar District (hereinafter referred to as complainant for short) against ((1) Shri. Thanji Wadikar, Junior Engineer, Taluk Panchayath, Aurad (B), Bidar District presently working as Assistant Executive Engineer, PRED sub-division, Aland, Kalburgi District (Date of retirement 01/06/2020) (2) Balaji Pokalvara, Junior Engineer, Zilla Panchayath, Grama Panchayath, Bhandara Kumata, Aurad(B) Taluk, Bidar District (3) Dasharatha Gayakwad, Secretary, Grama Panchayath, Bhandara Kumta, Aurad(B) Taluk, Bidar District (4) Prabhakar Kulkarni, Secretary, Grama Panchayath, Bhandara Kumata, Aurad(B) Taluk, Bidar District and (5) Mahamod Haneef, President, Grama Panchayath, Bhandara Kumta, Aurad(B) Taluk, Bidar District. (hereinafter referred to as 'respondent Nos. 1 to 5' for short).

5. The allegations in the complaint are that the grants of Rs. 1,80,000/- in the year 2003-04 under development fund, grant of Rs. 1,00,000/- in the year 2005-06 under SJRY funds, grant of Rs. 75,000/- in the year 2005-06 under Jawaharlal Scheme funds, in all grant of Rs.

B

3,55,000/ was sanctioned for constructing Grama Panchayath building at Bhandara Kumata Grama Panchayath. Without constructing the building, money has been misappropriated. Hence has prayed to take action against the respondents.

6. Chief Executive Officer Zilla Panchayath, Bidar has submitted letter dated 09/02/2011 along with the report of Executive Officer, Taluk Panchayath, Aurad(B) Taluk dated 09/02/2011 stating that on verification of the cash register of Grama Panchayath at page no.23 & 25 an amount of Rs. 2,39,755/- has been spent towards construction of Grama Panchayath building.

Further has stated that an amount of Rs. 1,14,410/- is shown to be spent for construction Grama Panchayath building in the cash register. But the said amount has been spent for formation road, supply of submersible pump, repairs to W/S at Bangarakunta, Dongargaon, Kherada.

Further has stated that in the MB book No.12/P-1 to 3 which is recorded with respect to construction of Grama Panchayath building up to basement level, the amount spent is mentioned as Rs. 1,45,791/-. But in the cash book an amount Rs. 2,39,755/- is shown to be spent towards construction of the Grama Panchayath building. Therefore the excess amount i.e.

2,39,755 - 1,45,791 = 94,004/- has been shown to be spent without any expenditure details in the records. Therefore there are prima-facie materials to infer misconduct.

7. Respondents-1, & 2 have submitted their comments dated 22/10/2007 and 02/07/2007 by denying complaint allegations. Respondent No-3 inspite of service of this office notice on 31/08/2007 and 12/12/2007 has not submitted his comments.

8. Executive Officer, Taluk Panchayath has submitted letter dated 07/04/2011 stating that the respondent no.1 & respondent no.3 have executed the works and are responsible for the expenditure stated above. The respondent no.1 in his comments has stated nothing about the expenditures with respect to the alleged work. Executive Officer in his report dated 09/02/2011 had clearly stated an amount of Rs. 94,004/- has been spent without any expenditure details in the records. Under the circumstances it is to be inferred that the said amount has been misappropriated by respondents no. 1 & 3. Therefore the comments of respondent no. 1 cannot be accepted at this stage. Respondent no.3 has not submitted his comments and therefore adverse inference is drawn against him. There are prima-facie

materials against respondents No.1 & 3 for the above said misconduct.

No misconduct can be inferred against respondents no. 2, 4, & 5.

9. It is ascertained from Panchayath Development Officer Bandara Kumata (Mob:9686059509) that the respondent no. 3 is retired at Chandoori Grama Panchayath. The same is also confirmed by calling the secretary Sri. Varadhendra Kulkarni, of Chandoori Grama Panchayath (Mob:7829304973). He has informed that the respondent no.3 had retired at Chandoori Grama Panchayath, Aland Taluk on 31/10/2011. Since the misconduct amounts to misappropriation of public funds, the bar of limitation prescribed under rule 214 (2) (b) of KCSR's is not applicable. Therefore inquiry can be initiated against the respondent no.3.

10. The facts and materials on record prima-facie show that, the respondent Nos. 1 and 3 have committed misconduct as per Rule 3 (i) to (iii) of KCS (Conduct) Rules, 1966. Accordingly, now, acting under Section 12(3) of The Karnataka Lokayukta Act, recommendation is made to the Competent Authority to initiate

disciplinary proceedings against **respondent No. 1- Shri. Thanji Wadikar,** Junior Engineer, Taluk Panchayath, Aurad (B), Bidar District presently working as Assistant Executive Engineer, PRED sub-division, Aland, Kalburgi District **(Date of retirement 01/06/2020)** and, **respondent No. 3- Dasharatha Gayakwad**, the then Secretary, Grama Panchayath, Bhandara Kumta, Aurad(B) Taluk, Bidar District, **(Retired on 31/10/2011)** and to entrust the inquiry to this Authority under Rule 14-A of the Karnataka Civil Services (Classification, Control and Appeal) Rules, 1957 along with sanction as required under section 214(2)(b) of KCSRs against respondent No. 3. and has committed an act of unbecoming of a Government servant and also dereliction of duty which amounts to misconduct within the meaning of Section 3(1) of KCS(Conduct) Rules, 1966 and committed dereliction of duty, thereby acted in a manner unbecoming of a Government servant which amounts to misconduct within the meaning of Section 3(1) of KCS(Conduct) Rules, 1966.

11. Having regard to the nature of allegations and having noticed various lapses, discrepancies, omissions, misappropriation committed in the execution of work,

the explanation offered by DGO Nos. 1, and 2 are not satisfactory and hence not acceptable.

12. The materials available on record prima facie disclose that DGOs No. 1 and 2, being Government Servants, have failed to maintain absolute integrity, devotion to duty and acted in a manner unbecoming of Government Servants, and thereby committed misconduct attracting 3(1) of KCS (Conduct) Rules, 1966 and liable for disciplinary action.

13. Considering these discrepancies and omissions/lapses and misappropriation of funds on the part of DGOs 1 and 2 since disciplinary action could be initiated as the said facts supported by materials placed on record *prima-facie show that* DGOs No. 1 and 2 have committed misconduct under Rule 3(1)(i) to (iii) of the KCS (Conduct) Rules, 1966, a report u/S 12(3) of Karnataka Lokayukta Act, 1984 was sent to the Competent Authority with a recommendation to initiate disciplinary proceedings against DGOs 1 and 2 to entrust the inquiry to this Authority U/Rule 14-A of Karnataka Civil Services (Classification, Control and Appeals) Rules, 1957. *In turn*, the Competent Authority initiated disciplinary proceedings against DGOs No. 1 and 2 and entrusted the enquiry to this Institution vide

reference no. 1 and Hon'ble Upalokayukta-1 has nominated this Enquiry Authority to conduct enquiry and report vide reference Nos. 2 and 3. *Hence*, this charge.

4. ಈ ಮೇಲ್ಕಂಡ ದೋಷಾರೋಪಣೆಯನ್ನು (ಆರ್ಟಿಕಲ್ಸ್ ಆಫ್ ಚಾರ್ಜ್) ಆ.ಸ.ನೌರವರುಗಳಿಗೆ ಕಳುಹಿಸಿದ್ದು, ಅದು ಜಾರಿಯಾದ ನಂತರ ಆ.ಸ.ನೌ-1 ಮತ್ತು 2 ರವರು ದಿನಾಂಕ: 25/03/2019 ರಂದು ಹಾಜರಾಗಿದ್ದು, ಆ.ಸ.ನೌ.ರವರುಗಳ ಪ್ರಥಮ ಮೌಖಿಕ ಹೇಳಿಕೆ, ನಿಯಮ-11 ಕೆ.ಸಿ.ಎಸ್ (ಸಿಸಿಎ) ರೂಲ್ಸ್ ರ ಅಡಿಯಲ್ಲಿ ದಾಖಲಿಸಲಾಗಿರುತ್ತದೆ. ಆ.ಸ.ನೌರವರು ತಪ್ಪೊಪ್ಪಿಕೊಳ್ಳದೆ, ಆರೋಪಗಳ ವಿಚಾರಣೆಯನ್ನು ಮಾಡಬಯಸಿರುತ್ತಾರೆ.

5. ಆ.ಸ.ನೌರವರುಗಳಿಗೆ ದಾಖಲೆಗಳ ಪರಿಶೀಲನೆಗಾಗಿ ಅವಕಾಶ ಕಲ್ಪಿಸಿರುತ್ತದೆ.

6. ಮೇಲ್ಕಂಡ ಆಪಾದನೆಗಳಿಗೆ ಸಂಬಂಧಿಸಿದಂತೆ, ಆ.ಸ.ನೌ.ರವರಿಂದ ಲಿಖಿತ ಹೇಳಿಕೆಯನ್ನು ಕೇಳಲಾಗಿತ್ತು. ಆ.ಸ.ನೌ-1 ಮತ್ತು 2 ರವರು ತಮ್ಮ ಲಿಖಿತ ಹೇಳಿಕೆಯಲ್ಲಿ ತಮ್ಮ ಮೇಲೆ ಹೊರಿಸಲಾದ ಆಪಾದನೆಗಳು ಅಸ್ಪಷ್ಟ, ಅನಿಚ್ಛಿತ ಹಾಗೂ ಆಧಾರ ರಹಿತವಾಗಿರುತ್ತದೆ ಅಂತಾ ಹೇಳಿರುತ್ತಾರೆ. ಆಪಾದನೆಯಲ್ಲಿ ಹೇಳಿದ ಎಲ್ಲಾ ವಿಷಯಗಳು ಸತ್ಯಕ್ಕೆ ದೂರವಾಗಿದ್ದು, ತಾವು ಯಾವುದೇ ಕರ್ತವ್ಯ ಲೋಪ ಎಸಗಿರುವುದಿಲ್ಲ ಅಂದು ಹೇಳಿರುತ್ತಾರೆ.

7. ಈ ವಿಚಾರಣೆಯಲ್ಲಿ, ಆ.ಸ.ನೌ.ರವರ ವಿರುದ್ಧ ಆರೋಪಿಸಲಾದ ಆರೋಪಕ್ಕೆ ಸಂಬಂಧಿಸಿದಂತೆ, ಶಿಸ್ತು ಪ್ರಾಧಿಕಾರವು ತಮ್ಮ ಪರವಾಗಿ ದೂರುದಾರರನ್ನು ಪಿ.ಡಬ್ಲ್ಯೂ.1 ಎಂದು ಸಾಕ್ಷ್ಯ ಮಾಡಿಸಿದ್ದು, ನಿ.ಪಿ.1 ರಿಂದ 4 ರವರೆಗಿನ ದಾಖಲಾತಿಗಳನ್ನು ಗುರುತುಪಡಿಸಿಕೊಂಡಿರುತ್ತಾರೆ. ಶ್ರೀ. ಪ್ರೇಮ್‌ಸಿಂಗ್ ಇವರನ್ನು ಪಿ.ಡಬ್ಲ್ಯೂ.2 ಎಂದು ಸಾಕ್ಷ್ಯ ಮಾಡಿಸಿದ್ದು, ನಿ.ಪಿ.5 ರಿಂದ 11

ರವರೆಗಿನ ದಾಖಲಾತಿಗಳನ್ನು ಗುರುತುಪಡಿಸಿಕೊಂಡಿರುತ್ತಾರೆ. ಆ.ಸ.ನೌ–1 ರವರು ತಮ್ಮನ್ನು ಡಿ.ಡಬ್ಲ್ಯೂ.1 ಎಂದು ಸಾಕ್ಷಿ ನುಡಿದಿದ್ದು, ನಿ.ಡಿ.1 ರಿಂದ 5 ರವರೆಗಿನ ದಾಖಲಾತಿಗಳನ್ನು ಗುರುತುಪಡಿಸಿಕೊಂಡಿರುತ್ತಾರೆ. ಆ.ಸ.ನೌ–2 ರವರು ತಮ್ಮ ಸಾಕ್ಷಿಯನ್ನು ಮಾಡಿಸಿರುವುದಿಲ್ಲ.

8. ಉಭಯ ಪಕ್ಷದವರ ಪರವಾಗಿ ವಾದ ವಿವಾದವನ್ನು ಆಲಿಸಲಾಯಿತು.

9. ಈ ಕೆಳಕಂಡ ಅಂಶಗಳು ನನ್ನ ನಿರ್ಣಯಕ್ಕೆ ಉದ್ಭವಿಸಿರುತ್ತವೆ.

**ಅಂಶ–1:** ವಿಚಾರಣಾ ಪ್ರಾಧಿಕಾರವು ಆ.ಸ.ನೌರವರುಗಳ ಮೇಲೆ ಆಪಾದಿಸಲಾದ ಆರೋಪಗಳನ್ನು ರುಜುವಾತುಪಡಿಸಿದೆಯೇ?

**ಅಂಶ–2:** ಆದೇಶವೇನು?

10. ಕಡತವನ್ನು ಪರಿಶೀಲಿಸಲಾಯಿತು ಮತ್ತು ಲಭ್ಯವಿರುವ ಮೌಖಿಕ ಮತ್ತು ದಸ್ತಾವೇಜು ಸಾಕ್ಷ್ಯವನ್ನು ಪರಿಶೀಲಿಸಲಾಯಿತು.

11. ಮೇಲ್ಕಂಡ ಪ್ರಶ್ನೆಗಳಿಗೆ ಕೆಳಗೆ ಚರ್ಚಿಸಿರುವ ಕಾರಣಗಳಿಂದ ಉತ್ತರವು ಈ ಕೆಳಕಂಡಂತಿವೆ.

**ಅಂಶ 1: ಆ.ಸ.ನೌ–1 ರವರ ವಿರುದ್ಧ ಭಾಗಶಃ ಸಕಾರಾತ್ಮಕವಾಗಿ.**
**ಆ.ಸ.ನೌ–2 ರವರ ವಿರುದ್ಧ ನಕಾರಾತ್ಮಕವಾಗಿ**

**ಅಂಶ 2: ಅಂತಿಮ ಆದೇಶದಂತೆ.**

## ಕಾರಣಗಳು

12. ಶಿಸ್ತು ಪ್ರಾಧಿಕಾರ ದೂರುದಾರರನ್ನು ಪಿ.ಡಬ್ಲ್ಯೂ.1 ಎಂದು ನುಡಿಸಾಕ್ಷಿ ಮಾಡಿದ್ದು, ತಮ್ಮ ಮುಖ್ಯ ವಿಚಾರಣೆಯಲ್ಲಿ ನಿ.ಪಿ.1 ರಿಂದ 4 ರವರೆಗಿನ ದಾಖಲಾತಿಗಳನ್ನು ಗುರುತಿಸಿಕೊಂಡಿರುತ್ತಾರೆ. ದೂರುದಾರರು ತಮ್ಮ ಮುಖ್ಯ ವಿಚಾರಣೆಯಲ್ಲಿ, 2003–04 ರಿಂದ 2005–06ನೇ ಸಾಲಿನಲ್ಲಿ

ವಿವಿಧ ಯೋಜನೆಗಳ ಅಡಿಯಲ್ಲಿ ಗ್ರಾಮ ಪಂಚಾಯತಿಯ ಕಟ್ಟಡ ನಿರ್ಮಾಣಕ್ಕಾಗಿ ಒಟ್ಟು ರೂ.3,55,000/- ಗಳು ಮಂಜೂರಾಗಿದ್ದು, 2007ನೇ ಸಾಲಿನವರೆಗೂ ಕಟ್ಟಡವನ್ನು ಕಟ್ಟಿರುವುದಿಲ್ಲ ಹಾಗೂ ಅನುದಾನದ ಹಣ ದುರುಪಯೋಗವಾಗಿರುತ್ತದೆ ಅಂತಾ ನಿ.ಪಿ.1 ರಂತೆ ದೂರನ್ನು ಸಲ್ಲಿಸಿರುತ್ತಾರೆ. ನಿ.ಪಿ.2 ಫಾರಂ ನಂ.1 ಮತ್ತು ನಿ.ಪಿ.3 ಫಾರಂ ನಂ.2 ಹಾಗೂ ನಿ.ಪಿ.4 ಈ ಕಾಮಗಾರಿಗೆ ಸಂಬಂಧಪಟ್ಟ ದಾಖಲಾತಿಗಳು ಇರುತ್ತದೆ. ಮುಂದುವರೆದು ತಮ್ಮ ಸಾಕ್ಷಿಯಲ್ಲಿ ದೂರನ್ನು ನೀಡಿದ ನಂತರ ಕಟ್ಟಡವನ್ನು ಕಟ್ಟಿರುತ್ತಾರೆ ಅಂತಾ ನುಡಿದಿರುತ್ತಾರೆ.

13. ಶಿಸ್ತು ಪ್ರಾಧಿಕಾರವು ತನಿಖಾಧಿಕಾರಿಗಳಾದ ಶ್ರೀ. ಪ್ರೇಮಸಿಂಗ್ ಇವರನ್ನು ಪಿ.ಡಬ್ಲ್ಯೂ.2 ಎಂದು ಸಾಕ್ಷ್ಯ ಮಾಡಿಸಿದ್ದು, ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಗ್ರಾಮ ಪಂಚಾಯಿತಿಯ ಕಟ್ಟಡ ನಿರ್ಮಾಣ ಕಾಮಗಾರಿಯ ಬಗ್ಗೆ, ಸ್ಥಳ ಪರಿಶೀಲಿಸಿ ವರದಿ ನೀಡಬೇಕೆಂದು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ನಿರ್ದೇಶಿಸಿದಂತೆ ದಿನಾಂಕ: 23/11/2010 ರಂದು ಭಂಡಾರ ಕುಮುಟ ಗ್ರಾಮ ಪಂಚಾಯಿತಿಗೆ ಭೇಟಿ ನೀಡಿ ದಾಖಲೆಗಳನ್ನು ಪರಿಶೀಲಿಸಿ ನಿ.ಪಿ.5 ರಂತೆ ಮಹಜರ್‌ನ್ನು ಮಾಡಿರುತ್ತೇನೆ ಅಂತಾ ನುಡಿದಿರುತ್ತಾರೆ. ದಿನಾಂಕ: 21/01/2011 ರಂದು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತಿ, ಬೀದರ್ ಇವರ ನಿರ್ದೇಶನದ ಮೇರೆಗೆ ಗ್ರಾಮ ಪಂಚಾಯಿತಿಯ ಸಿಬ್ಬಂದಿಗಳ ಮುಖಾಂತರ ದಾಖಲೆಗಳನ್ನು ಸಲ್ಲಿಸಲು ಸೂಚಿಸಿದ್ದ ಮೇರೆಗೆ ದಾಖಲೆಗಳನ್ನು ಪರಿಶೀಲಿಸಿ ಗ್ರಾಮ ಪಂಚಾಯಿತಿ ಕಟ್ಟಡಕ್ಕೆ ಮಾಡಲಾದ ವೆಚ್ಚದ ವಿವರಗಳನ್ನು ನಿ.ಪಿ.6 ರಂತೆ ದಾಖಲಿಸಿಕೊಂಡಿರುತ್ತೇನೆ ಅಂತಾ ನುಡಿದಿರುತ್ತಾರೆ. ಸದರಿ ವೆಚ್ಚವನ್ನು ನಗದು ಪುಸ್ತಕ ಪುಟ ನಂ.23 ಹಾಗೂ 25 ರಲ್ಲಿ ದಾಖಲಾಗಿರುತ್ತದೆ, ಸದರಿ ನಗದು ಪುಸ್ತಕ ನಿ.ಪಿ.7 ಅಂತಾ ಗುರುತಿಸಲಾಗಿರುತ್ತದೆ.

14. ನಗದು ಪುಸ್ತಕದಲ್ಲಿ ಗ್ರಾಮ ಪಂಚಾಯಿತಿ ಕಟ್ಟಡವು ಒಟ್ಟು ರೂ.2,39,755/- ಗಳನ್ನು ವೆಚ್ಚ ಮಾಡಿದ್ದು, ಗ್ರಾಮ ಪಂಚಾಯಿತಿ ಕಟ್ಟಡದ ಪ್ರಗತಿಗೆ ಅನುಗುಣವಾಗಿ ಅಳತೆಗಳನ್ನು ಅಳತೆ ಪುಸ್ತಕ ನಂ.12 ಪುಟ ನಂ.1 ರಿಂದ 3 ರಲ್ಲಿ ರೂ.1,45,754/- ಗಳ ಬಿಲ್ಲನ್ನು ದಾಖಲಿಸಿರುತ್ತಾರೆ ಅದನ್ನು ನಿ.ಪಿ.8 ಎಂದು ಗುರುತಿಸಲಾಗಿರುತ್ತದೆ. ಮುಂದುವರೆದು ತಮ್ಮ ಸಾಕ್ಷಿಯಲ್ಲಿ ಕಟ್ಟಡದ

ಸಾಮಗ್ರಿಗಳಿಗಾಗಿ ಹಾಗೂ ಕೂಲಿ ವೆಚ್ಚಕ್ಕಾಗಿ ರೂ.2,39,755/- ಗಳ ಖರ್ಚು ಮಾಡಿ ಅಳತೆ ಪುಸ್ತಕ ನಂಬರ್ ಪ್ರಕಾರ ರೂ.1,45,754/- ಗಳ ಪ್ರಗತಿಯಲ್ಲಿ ಸಾಧಿಸಿ ಉಳಿದ ರೂ.94,004/- ಗಳನ್ನು ಆ.ಸ.ನೌ-1 ರವರು ವರ್ಗಾವಣೆಯಾದ ನಂತರ ಶ್ರೀ. ಬಾಲಾಜಿ ಪೋಕಲವಾರ್, ಕಿರಿಯ ಅಭಿಯಂತರರಿಗೆ ಹಸ್ತಾಂತರ ಮಾಡಿದ ರಶೀದಿಯನ್ನು ಹಾಜರುಪಡಿಸಿದ್ದು, ಅದನ್ನು ನಿ.ಪಿ.9 ಅಂತಾ ಗುರುತಿಸಲಾಗಿರುತ್ತದೆ. ನಂತರ ಇವರು ಗ್ರಾಮ ಪಂಚಾಯಿತಿಯ ಕಟ್ಟಡಕ್ಕೆ ಭೇಟಿ ನೀಡಿದಾಗ, ಗ್ರಾಮ ಪಂಚಾಯತಿ ಕಟ್ಟಡ ಕಾಮಗಾರಿ ಪೂರ್ಣಗೊಂಡಿದ್ದು, ಈ ಬಗ್ಗೆ ಛಾಯಾಚಿತ್ರದ ನಕಲು ಪ್ರತಿಯನ್ನು ನಿ.ಪಿ.10 ಅಂತಾ ಗುರುತಿಸಲಾಗಿರುತ್ತದೆ. ನಂತರ ನಿ.ಪಿ.11 ರಂತೆ ತಮ್ಮ ವರದಿಯನ್ನು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಸಲ್ಲಿಸಿರುತ್ತಾರೆ ಅಂತಾ ನುಡಿದಿರುತ್ತಾರೆ.

15. ಆ.ಸ.ನೌ-1 ಇವರು ಡಿ.ಡಬ್ಲ್ಯೂ.1 ಎಂದು ಸಾಕ್ಷಿ ನುಡಿದಿದ್ದು, ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ ತಾಲ್ಲೂಕು ಪಂಚಾಯತಿ ಔರಾದ್ ನಲ್ಲಿ 2002 ರಿಂದ ಮೇ-2005 ರವರೆಗೆ ಕಿರಿಯ ಅಭಿಯಂತರರಾಗಿ ಕರ್ತವ್ಯ ನಿರ್ವಹಿಸಿದ್ದು, ಆ ವೇಳೆಯಲ್ಲಿ ಆ.ಸ.ನೌ-2 ಇವರು ಭಂಡಾರ ಕುಮುಟ ಗ್ರಾಮ ಪಂಚಾಯಿತಿಯ ಕಾರ್ಯದರ್ಶಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದರು ಅಂತಾ ನುಡಿದಿರುತ್ತಾರೆ. ಮುಂದುವರೆದು 2003-04 ರಿಂದ 2005-06 ನೇ ಸಾಲಿನ ವರೆಗೆ ರೂ.3,55,000/- ಗಳು ಬೇರೆ ಬೇರೆ ಕಾಮಗಾರಿಗಳಿಗಾಗಿ ಅನುದಾನ ಬಿಡುಗಡೆಯಾಗಿದ್ದು, ಸದರಿ ಮೊತ್ತದಲ್ಲಿ ರೂ.2,39,755/- ಗಳು ಗ್ರಾಮ ಪಂಚಾಯಿತಿಯ ಕಟ್ಟಡ ಸಂಬಂಧ ಮಂಜೂರಾಗಿದ್ದು, ಈ ಬಗ್ಗೆ ನಗದು ಪುಸ್ತಕದಲ್ಲಿ ನಮೂದು ಮಾಡಿರುತ್ತೇನೆ ಅಂತಾ ನುಡಿದಿರುತ್ತಾರೆ. ಮುಂದುವರೆದು ಖೇಡಾ ಗ್ರಾಮದಲ್ಲಿ ರಸ್ತೆ ನಿರ್ಮಾಣ ಮತ್ತು ಪಂಪ್‌ಸೆಟ್ ಖರೀದಿಗಾಗಿ ರೂ.58,750/- ಹಾಗೂ ಭಂಡಾರ ಕುಮುಟ ಡೊಂಗರಗಾವ್ ಮತ್ತು ಖೇಡಾ ಗ್ರಾಮದಲ್ಲಿ ಕುಡಿಯುವ ನೀರಿನ ದುರಸ್ಥಿಗಾಗಿ ರೂ.55,560/- ಗಳ ಖರ್ಚು ಮಾಡಲಾಗಿರುತ್ತದೆ. ಈ ಬಗ್ಗೆ ನಗದು ಪುಸ್ತಕದ ದೃಢೀಕೃತ ನಕಲನ್ನು ನಿ.ಡಿ.1 ಎಂದು ಮತ್ತು ರಶೀದಿಗಳನ್ನು ನಿ.ಡಿ.2 ಮತ್ತು 3 ಅಂತಾ ಗುರುತಿಸಿಕೊಂಡಿರುತ್ತಾರೆ.

16. ಮುಂದುವರೆದು ತಮ್ಮ ಸಾಕ್ಷಿಯಲ್ಲಿ ರೂ.1,45,791/– ಕ್ಕೆ ಗ್ರಾಮ ಪಂಚಾಯಿತಿಯ ಕಟ್ಟಡಕ್ಕೆ ಕಾಮಗಾರಿ ಬೇಸ್‌ಮೆಂಟ್ ವರೆಗೆ ಖರ್ಚು ಮಾಡಿದ್ದು, ಉಳಿಕ ರೂ.94,004/– ಗಳ ಮೊತ್ತ ಸಾಮಗ್ರಿಗಳನ್ನು ಇವರು ವರ್ಗಾವಣೆ ಆಗುವಾಗ ಬಾಲಾಜಿ ಪೋಕಲವಾರ್ ಇವರಿಗೆ ನಿ.ಪಿ.9 ರಂತೆ ವರ್ಗಾಯಿಸಿರುತ್ತಾರೆ ಅಂತಾ ನುಡಿದಿರುತ್ತಾರೆ. ಅಲ್ಲದೇ ತಾನು ವರ್ಗಾವಣೆಗೊಂಡ ನಂತರ ಕಾರ್ಯನಿರ್ವಾಹಕ ಅಧಿಕಾರಿಗಳು ತಾಲ್ಲೂಕು ಪಂಚಾಯತಿ ಔರಾದ್ ಇವರಿಗೆ ಮಾಹಿತಿ ಕೊಟ್ಟಿದ್ದು, ಈ ಬಗ್ಗೆ ಬೇಬಾಕಿ ಪ್ರಮಾಣ ಪತ್ರದ ನಕಲು ಪ್ರತಿಯನ್ನು ನಿ.ಡಿ.4 ಅಂತಾ ಗುರುತಿಸಿಕೊಂಡಿರುತ್ತಾರೆ. ನಂತರ ಬಾಲಾಜಿ ಪೋಕಲವಾರ್ ಇವರು ಸದರಿ ಸಾಮಗ್ರಿಗಳನ್ನು ತೆಗೆದುಕೊಂಡು ಗ್ರಾಮ ಪಂಚಾಯಿತಿಯ ಕಟ್ಟಡವನ್ನು ಪೂರ್ಣಗೊಳಿಸಿರುತ್ತಾರೆ. ಈ ಬಗ್ಗೆ ನಿ.ಡಿ.5 ರ ಪ್ರಕಾರ ಛಾಯಾಚಿತ್ರಗಳನ್ನು ಸಲ್ಲಿಸಿರುತ್ತಾರೆ.

17. ದೂರುದಾರ, ಪಿ.ಡಬ್ಲ್ಯೂ.2 ಮತ್ತು ಆ.ಸ.ನೌ–1 ಇವರ ಸಾಕ್ಷ್ಯಗಳನ್ನು ಹಾಗೂ ದಾಖಲಾತಿಗಳನ್ನು ಪರಿಶೀಲಿಸಲಾಗಿ ದೂರುದಾರರು ನಿ.ಪಿ.4 ರಲ್ಲಿ ಸಲ್ಲಿಸಿದ ದಾಖಲಾತಿಗಳು ಈ ಪ್ರಕರಣಕ್ಕೆ ಸಂಬಂಧಿಸಿದ್ದು ಇರುವುದಿಲ್ಲ. ತನಿಖಾಧಿಕಾರಿಗಳು ತಮ್ಮ ವರದಿ ದಿನಾಂಕ: 09/02/2011 ರಲ್ಲಿ ನಗದು ಪುಸ್ತಕದಲ್ಲಿ ಗ್ರಾಮ ಪಂಚಾಯಿತಿ ಕಟ್ಟಡಕ್ಕಾಗಿ ಎಂದು ನಮೂದಿಸಿ ಬೇರೆ ಕಾಮಗಾರಿಗಳಿಗೆ ಖರ್ಚು ಮಾಡಿದ ವಿವರಗಳನ್ನು ಸಲ್ಲಿಸಿರುತ್ತಾರೆ. ಅದರಲ್ಲಿ ದಿನಾಂಕ: 27/01/2014 ರಂದು ನಗದು ಪುಸ್ತಕ ಪುಟ ನಂ.24 ರಲ್ಲಿ ರೂ.58,760/– ಗಳ ಮೊತ್ತವನ್ನು ತೋರಿಸಿದ್ದು, ಅದರಲ್ಲಿ ರಸ್ತೆ ನಿರ್ಮಾಣಕ್ಕಾಗಿ ಮತ್ತು submersible pump ನ್ನು ಖರೀದಿಗಾಗಿ ರೂ.58,760/– ಗಳೆಂದು ನಮೂದಿಸಿರುತ್ತಾರೆ. ದಿನಾಂಕ: 13/02/2014 ರಂದು ನಗದು ಪುಸ್ತಕ ಪುಟ ನಂ.24 ರಲ್ಲಿ ಭಂಡಾರ ಕುಮುಟ, ಡೋಂಗರಗಾವ್ ಹಾಗೂ ಖೇರಡಾ ಗ್ರಾಮಗಳಲ್ಲಿನ ನೀರಿನ ದುರಸ್ತಿಗಾಗಿ ರೂ.55,650/– ಗಳೆಂದು ನಮೂದು ಮಾಡಿರುತ್ತಾರೆ ಅಂತಾ ಹೇಳಿರುತ್ತಾರೆ. ಮುಂದುವರೆದು ನಗದು ಪುಸ್ತಕದಲ್ಲಿ ಗ್ರಾಮ ಪಂಚಾಯಿತಿಯ ಕಟ್ಟಡಕ್ಕಾಗಿ ತಪ್ಪಾಗಿ ನಮೂದಿಸಿರುತ್ತಾರೆ. ಆದರೆ ಖರ್ಚಿನ ವಿವರ ಅಳತೆ ಪುಸ್ತಕ ಮತ್ತು ವೋಚರ್ ಪರಿಶೀಲಿಸಿದಾಗ ಕಾಮಗಾರಿಗಳು ಬೇರೆಯಾಗಿರುತ್ತವೆ. ಹಾಗಾಗಿ ದೂರುದಾರರು

ನೀಡಿದ ದೂರಿನ ಮೊತ್ತಕ್ಕೆ ರೂ.3,55,000/–ಕ್ಕೆ, ಕಟ್ಟಡಕ್ಕೆ ಆದ ಖರ್ಚು + ಇನ್ನಿತರ ಖರ್ಚು ಎಂದರೆ ರೂ.2,39,755/– + ರೂ.1,14,410/– = ಒಟ್ಟು ರೂ.3,54,165 ಕ್ಕೆ ಸರಿ ಹೊಂದುತ್ತದೆ. ಆದ್ದರಿಂದ ಗ್ರಾಮ ಪಂಚಾಯಿತಿ ಕಟ್ಟಡ ಕಟ್ಟಲು ರೂ. ರೂ.2,39,755/– ಖರ್ಚು ತೋರಿಸಿರುತ್ತಾರೆ. ಮುಂದುವರೆದು ಗ್ರಾಮ ಪಂಚಾಯಿತಿ ಕಟ್ಟಡದ ಬೇಸ್‌ಮೆಂಟ್ ಒಳಗೆ ಆದ ಕಾಮಗಾರಿಯ ಬಿಲ್ಲನ್ನು ಅಳತೆ ಪುಸ್ತಕ ನಂ.12/ಪಿ–1 ರಿಂದ 3 ರಲ್ಲಿ ದಾಖಲಿಸಿದ್ದು, ಬಿಲ್ಲಿನ ಮೊತ್ತ ರೂ.1,45,754/– ಇರುತ್ತದೆ. ಆದರೆ ಕಟ್ಟಡಕ್ಕಾಗಿ ಬೇಸ್‌ಮೆಂಟ್ ವರೆಗೆ ಖರ್ಚು ಮಾಡಿದ ಮೊತ್ತ ರೂ.2,39,755/– ಇರುತ್ತದೆ. ಹಾಗಾಗಿ ಹೆಚ್ಚಾಗಿ ಖರ್ಚು ಮಾಡಿದ ಹಣ ರೂ.2,39,755/– – ರೂ.1,45,791/– = ಒಟ್ಟು ರೂ.94,004/– ಗಳಿಗೆ ಯಾವುದೇ ವಿವರ ಕಡತದಲ್ಲಿ ಲಭ್ಯವಿರುವುದಿಲ್ಲ. ಹಾಗಾಗಿ ಶ್ರೀ. ತಾನಾಜಿ ವಾಡಿಕರ, ಕಿರಿಯ ಅಭಿಯಂತರರು (ಹಿಂದಿನ) ಇವರನ್ನು ಸಂಪರ್ಕಿಸಲಾಗಿ ಸದರಿಯವರು ರೂ.94,004/–ಗಳ ಸಾಮಾಗ್ರಿಗಳನ್ನು ಶ್ರೀ. ಬಾಲಾಜಿ ಪೋಕಲವಾರ್, ಕಿರಿಯ ಅಭಿಯಂತರರು (ಹಿಂದಿನ) ಇವರಿಗೆ ಹಸ್ತಾಂತರಿಸಿದ ರಶೀದಿಯನ್ನು ಸಲ್ಲಿಸಿರುತ್ತಾರೆ. ಆ.ಸ.ನೌ–1 ಇವರ ಪ್ರಕಾರ ಗ್ರಾಮ ಪಂಚಾಯಿತಿ ಕಟ್ಟಡಕ್ಕೆ ಇಂತಿಷ್ಟೆ ಹಣ ಮಂಜೂರಾಗಿರುತ್ತದೆ ಎನ್ನುವ ಬಗ್ಗೆ ನಿರ್ದೇಶನ ಇರಲಿಲ್ಲ ಒಟ್ಟು ಎಲ್ಲಾ ಯೋಜನೆಗಳು ಸೇರಿ ರೂ.3,55,000/– ಮಂಜೂರಾಗಿದ್ದು, ಅದರಲ್ಲಿ ಗ್ರಾಮ ಪಂಚಾಯಿತಿ ಕಟ್ಟಡಕ್ಕೆ ರೂ.2,39,755/– ಖರ್ಚಾಗಿರುತ್ತದೆ ಉಳಿದ ರೂ.94,004/– ಗಳಿಗೆ ಸಂಬಂಧಪಟ್ಟಂತೆ ತಾನು ವರ್ಗಾವಣೆಗೊಂಡಿದ್ದರಿಂದ ಶ್ರೀ. ಬಾಲಾಜಿ ಪೋಕಲವಾರ್ ಇವರಿಗೆ ನಿ.ಪಿ.9 ರಂತೆ ರೂ.94,004/– ಗಳ ಸಾಮಗ್ರಿಗಳನ್ನು ಹಸ್ತಾಂತರ ಮಾಡಿದ್ದು, ನಂತರ ಬಾಲಾಜಿ ಪೋಕಲವಾರ್ ಇವರು ಗ್ರಾಮ ಪಂಚಾಯಿತಿಯ ಕಟ್ಟಡವನ್ನು ಕಟ್ಟಿರುತ್ತಾರೆ ಅಂತಾ ಹೇಳಿರುತ್ತಾರೆ. ಇದರಲ್ಲಿ ಗಮನಿಸಬೇಕಾದ ಸಂಗತಿಯೇನೆಂದರೆ ತನಿಖಾಧಿಕಾರಿಗಳ ಪ್ರಕಾರ ರೂ.94,004/– ಗಳು ಯಾವ ಯಾವ ಮೊತ್ತ ಸಾಮಗ್ರಿಗಳನ್ನು ಖರೀದಿ ಮಾಡಿರುತ್ತಾರೆ ಎನ್ನುವ ಬಗ್ಗೆ ಯಾವುದೇ ದಾಖಲಾತಿಗಳು ಇರುವುದಿಲ್ಲ ಅಂತಾ ತಮ್ಮ ವರದಿಯಲ್ಲಿ ಹೇಳಿರುತ್ತಾರೆ. ನಿ.ಪಿ.9ನ್ನು ಪರಿಶೀಲಿಸಿದಾಗ ರೂ.94,004/– ಮೊತ್ತದ ಸಾಮಗ್ರಿಗಳನ್ನು ಬಾಲಾಜಿ ಪೋಕಲವಾರ್ ಇವರಿಗೆ ಹಸ್ತಾಂತರ ಮಾಡಿರುತ್ತೇನೆ ಅಂತಾ ನಮೂದು ಇರುತ್ತದೆ. ಆದರೆ ನಿ.ಪಿ.9 ರಲ್ಲಿ ಯಾವ ದಿನಾಂಕದಂದು ಹಸ್ತಾಂತರಿಸಲಾಗಿದೆ ಅಂತಾ ನಮೂದು ಇರುವುದಿಲ್ಲ ಮತ್ತು ಈ ಬಗ್ಗೆ ನಗದು

ಪುಸ್ತಕದಲ್ಲಿ ನಮೂದು ಇರುವುದಿಲ್ಲ ಅಂತಾ ತನಿಖಾಧಿಕಾರಿಗಳು ತಮ್ಮ ವರದಿಯಲ್ಲಿ ತಿಳಿಸಿರುತ್ತಾರೆ.

18. ಆ.ಸ.ನೌ–1 ಇವರ ಪ್ರಕಾರ ತಾನು ವರ್ಗಾವಣೆಗೊಂಡ ನಂತರ ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯಿತಿ, ಔರಾದ್ (ಬಿ) ಇವರು ದಿನಾಂಕ: 30/03/2006 ರಂದು ಇವರ ಹೆಸರಿನಲ್ಲಿ ಯಾವುದೇ ತರಹದ ಬಾಕಿ ಇರುವುದಿಲ್ಲವೆಂದು ಹಾಗೂ ಇವರು ನಿರ್ವಹಿಸುತ್ತಿರುವ ಎಲ್ಲಾ ಕಾಮಗಾರಿಗಳು ಪೂರ್ಣಗೊಂಡಿರುತ್ತವೆ ಅಂತಾ ಹೇಳಿದ್ದು, ಈ ಬಗ್ಗೆ ನಿ.ಡಿ.4 ನ್ನು ಹಾಜರುಪಡಿಸಿರುತ್ತಾರೆ. ಅಲ್ಲದೇ, ನಿ.ಡಿ.5 ರಂತೆ ಗ್ರಾಮ ಪಂಚಾಯಿತಿಯ ಕಟ್ಟಡ ಪೂರ್ಣಗೊಂಡ ಬಗ್ಗೆ 4 ಛಾಯಾಚಿತ್ರಗಳನ್ನು ಹಾಜರುಪಡಿಸಿರುತ್ತಾರೆ. ದೂರುದಾರರ ಪ್ರಕಾರ ತಾನು ದೂರನ್ನು ಸಲ್ಲಿಸಿದ ನಂತರ ಕಟ್ಟಡದ ಕಾಮಗಾರಿಯನ್ನು ಮಾಡಿರುತ್ತಾರೆ ಅಂತಾ ಹೇಳಿರುತ್ತಾರೆ. ಆ.ಸ.ನೌ–1 ಇವರು ಗ್ರಾಮ ಪಂಚಾಯಿತಿ ಕಟ್ಟಡಕ್ಕೆ ಸಂಬಂಧಪಟ್ಟಂತೆ ಅಂದಾಜು ಪತ್ರಿಕೆಯನ್ನಾಗಲೀ ಅಥವಾ ಇಷ್ಟು ದಿನ/ತಿಂಗಳ/ವರ್ಷದಲ್ಲಿ ಕಟ್ಟಡವನ್ನು ಕಟ್ಟಬೇಕೆಂದು ನಮೂದು ಇದ್ದ ಬಗ್ಗೆ ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ. ಅಲ್ಲದೇ ಇಷ್ಟೇ ಹಣ ಗ್ರಾಮ ಪಂಚಾಯಿತಿಯ ಕಟ್ಟಡಕ್ಕೆ ಖರ್ಚು ಮಾಡಬೇಕೆನ್ನುವ ಬಗ್ಗೆ ಯಾವುದೇ ದಾಖಲಾತಿಯನ್ನು ಹಾಜರುಪಡಿಸಿರುವುದಿಲ್ಲ. ನಿ.ಡಿ.4 ರಂತೆ ಕಟ್ಟಡದ ಛಾಯಾಚಿತ್ರಗಳನ್ನು ಹಾಜರುಪಡಿಸಿದ್ದು, ಅದನ್ನು ಪರಿಶೀಲಿಸಲಾಗಿ ಗ್ರಾಮ ಪಂಚಾಯತಿ ಕಟ್ಟಡವು ಆಗಿದ್ದು ಕಂಡುಬಂದಿರುತ್ತದೆ. ಆದರೆ ಕಟ್ಟಡ ಕಾಮಗಾರಿಯು ಯಾವಾಗ ಪ್ರಾರಂಭ ಮಾಡಿ, ಯಾವಾಗ ಪೂರ್ಣಗೊಳಿಸಲಾಗಿರುತ್ತದೆ ಅಂತಾ ಯಾವುದೇ ದಾಖಲಾತಿಗಳನ್ನು ಸಲ್ಲಿಸಿರುವುದಿಲ್ಲ. ಅಲ್ಲದೇ, ರೂ.94,004/– ಗಳಿಗೆ ಸಂಬಂಧಪಟ್ಟಂತೆ ಸಾಮಗ್ರಿಗಳನ್ನು ಖರೀದಿ ಮಾಡಿದ ಬಗ್ಗೆ ವಿವರಣೆ ಹಾಗೂ ರಶೀದಿಗಳನ್ನು ಹಾಜರುಪಡಿಸಿರುವುದಿಲ್ಲ. ಆದ್ದರಿಂದ, ಮಂಡನಾಧಿಕಾರಿಗಳು ಶಿಸ್ತು ಪ್ರಾಧಿಕಾರದ ಪರವಾಗಿ ಅಂಶ–1ನ್ನು ಆ.ಸ.ನೌ–1 ಇವರ ವಿರುದ್ಧ ಭಾಗಶಃ ಸಕಾರಾತ್ಮಕವಾಗಿ ರುಜುವಾತುಪಡಿಸಿರುತ್ತಾರೆ. ಆ.ಸ.ನೌ–2 ಇವರ ವಿರುದ್ಧ ಮಂಡನಾಧಿಕಾರಿಗಳು ಶಿಸ್ತು ಪ್ರಾಧಿಕಾರದ ಪರವಾಗಿ ಕರ್ತವ್ಯ ಲೋಪ ಎಸಗಿರುತ್ತಾರೆ ಎನ್ನುವ ಬಗ್ಗೆ ಯಾವುದೇ

ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ. ಆದ್ದರಿಂದ, ಆ.ಸ.ನೌ–2 ಇವರ ವಿರುದ್ಧ ಅಂಶ–1ನ್ನು ರುಜುವಾತುಪಡಿಸಿರುವುದಿಲ್ಲ.

19. ಈ ಮೇಲ್ಕಂಡ ಕಾರಣಗಳು ಮತ್ತು ಚರ್ಚೆಯಿಂದಾಗಿ, ಆ.ಸ.ನೌ–1 ರವರ ವಿರುದ್ಧ ಆಪಾದಿಸಲಾದ ಆರೋಪಗಳನ್ನು ವಿಚಾರಣಾ ಪ್ರಾಧಿಕಾರವು ರುಜುವಾತುಪಡಿಸುವಲ್ಲಿ ಭಾಗಶಃ ಸಫಲವಾಗಿರುತ್ತದೆ ಎನ್ನುವ ನಿರ್ಣಯಕ್ಕೆ ಬಂದು ಅಂಶ–1ನ್ನು ಭಾಗಶಃ ಸಕಾರಾತ್ಮಕವಾಗಿ ಮತ್ತು ಆ.ಸ.ನೌ–2 ರವರ ವಿರುದ್ಧ ಆಪಾದಿಸಲಾದ ಆರೋಪಗಳನ್ನು ವಿಚಾರಣಾ ಪ್ರಾಧಿಕಾರವು ರುಜುವಾತುಪಡಿಸುವಲ್ಲಿ ವಿಫಲವಾಗಿರುತ್ತದೆ ಎನ್ನುವ ನಿರ್ಣಯಕ್ಕೆ ಬಂದು ನಕಾರಾತ್ಮಕವಾಗಿ ಉತ್ತರಿಸಿರುತ್ತೇನೆ.

20. **ಅಂಶ–2: ಈ ಮೇಲ್ಕಂಡ ಕಾರಣಗಳಿಗಾಗಿ, ಈ ಕೆಳಕಂಡಂತೆ ನಿರ್ಣಯಿಸಲಾಗಿದೆ.**

## ನಿರ್ಣಯ

ಆ.ಸ.ನೌಕರ (1) **ಶ್ರೀ. ತುಕಾರಾಜಿ ವಾಡಿಕರ,** ಅಂದಿನ ಕಿರಿಯ ಅಭಿಯಂತರರು, ತಾಲ್ಲೂಕು ಪಂಚಾಯತಿ, ಔರಾದ್ (ಬಿ) ಹಾಲಿ ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಉಪ–ವಿಭಾಗ, ಬ್ಯಾಡಗಿ, ಹಾವೇರಿ ಜಿಲ್ಲೆ ಇವರ ವಿರುದ್ಧ ಆಪಾದಿಸಿದಂತೆ ಗ್ರಾಮ ಪಂಚಾಯಿತಿ ಕಟ್ಟಡವು ನಿರ್ಮಾಣವಾಗಿದ್ದರೂ ಸಹಿತ, ರೂ.94,004/– ಗಳಿಗೆ ಸಂಬಂಧಪಟ್ಟಂತೆ ಸಾಮಗ್ರಿಗಳನ್ನು ಖರೀದಿ ಮಾಡಿದ ಬಗ್ಗೆ ವಿವರಣೆಗಳನ್ನು ನೀಡದೇ ಹಾಗೂ ರಶೀದಿ ಹಾಜರು ಮಾಡದ ಕಾರಣ ಶಿಸ್ತುಪ್ರಾಧಿಕಾರವು ಭಾಗಶಃ ಸಫಲವಾಗಿರುತ್ತದೆ ಎಂದು ನಿರ್ಣಯಿಸಲಾಗಿದೆ.

**ಮತ್ತು**

(2) **ಶ್ರೀ. ದಶರಥ ಗಾಯಕವಾಡ್,** ಅಂದಿನ ಕಾರ್ಯದರ್ಶಿ, ಭಂಡಾರ ಕುಮಟಾ ಗ್ರಾಮ ಪಂಚಾಯತಿ, ಔರಾದ್ (ಬಿ) ತಾಲ್ಲೂಕು (ಪ್ರಸ್ತುತ ನಿವೃತ್ತ) ಇವರ ವಿರುದ್ಧ ಆಪಾದಿಸಲಾದ ಆರೋಪಗಳನ್ನು ರುಜುವಾತುಪಡಿಸಲು ಶಿಸ್ತುಪ್ರಾಧಿಕಾರವು ವಿಫಲವಾಗಿರುತ್ತದೆ ಎಂದು ನಿರ್ಣಯಿಸಲಾಗಿದೆ.

**ಆ.ಸ.ನೌ–1 ರವರ ನಿವೃತ್ತಿ ದಿನಾಂಕ: 31/05/2020 ಮತ್ತು ಆ.ಸ.ನೌ–2 ರವರ ನಿವೃತ್ತಿ ದಿನಾಂಕ: 31/10/2011 ಆಗಿರುತ್ತದೆ.**

ಈ ವರದಿಯನ್ನು ಮಾನ್ಯ ಉಪಲೋಕಾಯುಕ್ತ ರವರಿಗೆ ಮುಚ್ಚಿದ ಲಕೋಟೆಯಲ್ಲಿ ಸಲ್ಲಿಸುವಂತೆ ಕಛೇರಿಗೆ ಆದೇಶಿಸಲಾಗಿದೆ.

**(ಸುದೇಶ್ ರಾಜಾರಾಮ್ ಪರದೇಶಿ)**
ಅಪರ ನಿಬಂಧಕರು ವಿಚಾರಣೆಗಳು–14,
ಕರ್ನಾಟಕ ಲೋಕಾಯುಕ್ತ,
ಬೆಂಗಳೂರು.

## ANNEXURES

| Sl. No. | Particulars of Documents | |
|---|---|---|
| 1 | **Witness examined on behalf of the Disciplinary Authority** | |
| | **PW-1** | Sri. Narayana Rao Babu Rao Patil, Bandara Kumta, Aurad, Bidar. |
| | **PW-2** | Sri. Premsingh S/o Beekkusingh, Suptd. Engineer, Kalburgi. |
| 2 | **Documents marked on behalf of the Disciplinary Authority Ex.P-1 to Ex.P-4** | |
| | **Ex.P.1 & 1(a)** | Complaint dtd: 01/01/2007 given to this institution with signature. |
| | **Ex.P.2** | Form No.1. |
| | **Ex.P.3** | Form No.2 (Affidavit). |
| | **Ex.P.4** | Letter dtd: 17/12/2007 given to this institution with enclosures. |
| | **Ex.P.5** | Mahazar. |
| | **Ex.P.6** | M.B Book. |
| | **Ex.P.7** | Cash book. |
| | **Ex.P.8** | M.B Book. |
| | **Ex.P.9** | Receipt. |
| | **Ex.P. 10** | Xerox copy of photographs. |

| | | |
|---|---|---|
| | **Ex.P. 11** | Letter dtd: 09/02/2011 submitted to CEO, Zilla Panchayath, Bidar. |
| 3 | **Witness examined on behalf of the DGO, Documents marked on behalf of the DGO** | |
| | **DW-1** | Sri. Thanaji Wadekar S/o Yadava Rao, Rtd. AEE, Bidar. |
| 4 | **Documents marked on behalf of the DGOs through the complainant** | |
| | **Ex.D.1** | Cash book. |
| | **Ex.D.2** | Receipt. |
| | **Ex.D.3** | Receipt. |
| | **Ex.D.4** | Arrears Certificate. |
| | **Ex.D.5** | Original photographs. |

Dated this the 29th August, 2022

**(SUDESH RAJARAM PARADESHI)**
Additional Registrar Enquiries-14,
Karnataka Lokayukta,
Bangalore.